ಆಂಧ್ರಪ್ರದೇಶ ರಾಜ್ಯ ಸರ್ಕಾರದೊಂದಿಗೆ ಪರಸ್ಪರ ಒಪ್ಪಂದದ ಬಗ್ಗೆ ಪತ್ರ ವ್ಯವಹಾರವನ್ನು ಮಾಡಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳು ಕೇವಲ ತಿರುಪತಿಯವರೆಗೆ ಮಾತ್ರ ಹೋಗುವುದರಿಂದ ಇವರ ಆದಾಯ ಮಟ್ಟದಲ್ಲಿ ಕುಸಿತ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇದರಿಂದಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳು ಬೆಂಗಳೂರಿನಿಂದ ತಿರುಪತಿಗೆ ಹೋಗುವ ಸುತ್ತುವಳಿಗಳ ಆದಾಯದಲ್ಲಿ ಶೇ 15ರಷ್ಟು ಇಳಿಮುಖವಾಗಿರುವುದು. ಪ್ರತಿ ಸುತ್ತುವಳಿಯಲ್ಲಿ ಬರುತ್ತಿದ್ದ ಸರಾಸರಿ ರೂ 2,066.00ಗಳ ಆದಾಯ ರೂ 1,756.00 ಕ್ಕೆ ಇಳಿದಿದೆ. ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮಾಡಿದ ಮನವಿಯನ್ನು ಪುರಸ್ಕರಿಸಲಿಲ್ಲವಾದುದರಿಂದ ಕರ್ನಾಟಕ ಸರ್ಕಾರವು ಇತ್ತೀಚೆಗೆ ಆಂಧ್ರ ಪ್ರದೇಶ ಸರ್ಕಾರಕ್ಕೆ ಒಂದು ಪತ್ರ ಬರೆದು ಸದರಿ ಮಾರ್ಗದ ಮೇಲೆ ಪರಸ್ಪರತೆ ಉಳಿಸಲು ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬೆಂಗಳೂರು-ತಿರುಮಲ ಮಾರ್ಗದ ಮೇಲಿನ ತನ್ನ ಬಸ್ಸುಗಳನ್ನು ತಿರುಪತಿಯವರೆಗೆ ಮಾತ್ರ ಓಡಿಸುವಂತೆ ತಿಳುವಳಿಕೆ ನೀಡಲು ಕೋರಲಾಗಿದೆ. ಇಲ್ಲದಿದ್ದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ತಿರುಮಲೆವರೆಗೆ ಓಡಿಸಲು ಸಹ ಅನುಮತಿ ನೀಡುವಂತೆ ಕೋರಿಲಾಗಿದ್ದು ಆ ಸರ್ಕಾರದ ಉತ್ತರಕ್ಕಾಗಿ ನಿರೀಕ್ಷಿಸಲಾಗುತ್ತಿದೆ.

(5) ದ.ಕನ್ನಡ ಜಿಲ್ಲೆಯ ಸಮುದ್ರ ಕೊರೆತ ಸಂಭವಿಸಿದಾಗ ಕಾಮಗಾರಿ ಕೆಲಸಕ್ಕೆ ಬಿಡುಗಡೆಯಾದ ಹಣ.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ಸಂಭವಿಸಿದಾಗ 1993ರಲ್ಲಿ 12 ತುರ್ತು ಕೆಲಸಗಳಿಗಾಗಿ ರೂ. 11.86ಲಕ್ಷ ವೆಚ್ಚದಲ್ಲಿ ಕಾಮಗಾರಿ ಮಾಡಲಾಗಿತ್ತು. ಈ ಬಗ್ಗೆ ಈ ವರೆಗೆ ಆಡಳಿತ ಅನಮೋದನೆ ನೀಡಿಲ್ಲ. 1994ನೇ ಇಸವಿಯಲ್ಲಿ ರೂ. 51.38 ಲಕ್ಷ ಆಡಳಿತ ಅನುಮೋದನೆ ನೀಡಿದ್ದರೂ ಕೇವಲ ರೂ. 15 ಲಕ್ಷ ಬಿಡುಗಡೆ ಗೊಳಿಸಿದ್ದು ರೂ. 36.38 ಲಕ್ಷ ಬಾಕಿ ಇರಿಸಲಾಗಿದೆ. 1995ರಲ್ಲಿ ಅತ್ಯಂತ ತೀವ್ರ ಸಮುದ್ರ ಕೊರೆತದಿಂದಾಗಿ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ತುರ್ತು ಕೆಲಸ ಸರ್ಕಾರ ಮಾಡಿಸಿದ್ದರೂ ಈ ಬಗ್ಗೆ ಈವರೆಗೆ ಯಾವುದೇ ಆಡಳಿತ ಅನುಮೋದನೆಯಾಗಲೀ, ಹಣ ಬಿಡುಗಡೆಯಾಗಲೀ ಆಗಿಲ್ಲ. ಈ ಬಗ್ಗೆ ಕಾಮಗಾರಿ ಮಾಡಿದ ಗುತ್ತಿಗೆದಾರರು ಇನ್ನೊಂದು ಸಮುದ್ರ ಕೊರೆತ ನಡೆದಾಗ ತುರ್ತು ಕೆಲಸ ಮಾಡಲು ಮುಂದೆ ಬಾರದಿದ್ದರೆ ನಡೆಯಲಿರುವ ಅನಾಹುತಕ್ಕೆ ಯಾರು ಕಾರಣರಾಗುತ್ತಾರೆ ಎನ್ನುವುದನ್ನು ತಿಳಿಸುವಿರಾ? 1993-1994-1995ರ ಈ ತುರ್ತು ಕಾಮಗಾರಿಗಳ ಆಡಳಿತ ಅನುಮೋದನೆ ಮತ್ತು ಹಣ ಬಿಡುಗಡೆ ಯಾವಾಗ ಮಾಡುತ್ತೀರಿ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1993ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ಸಂಭವಿಸಿದಾಗ 12 ತುರ್ತು ಕಾಮಗಾರಿಗಳನ್ನು ರೂ. 11.86 ಲಕ್ಷ ವೆಚ್ಚದಲ್ಲಿ ಜಿಲ್ಲಾಧಿಕಾರಿಗಳ ಅನುದಾನದಲ್ಲಿ ಮಾಡಲಾಗಿದೆ. ಈ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಅದೇ ಸಾಲಿನಲ್ಲಿ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಹಣ ಬಿಡುಗಡೆ ಕೋರಲು ನೀರಾವರಿ ಇಲಾಖೆಯಿಂದ ಕೋರಲಾಗಿತ್ತು ಆದರೆ ಹಣ ಬಿಡುಗಡೆಯಾಗಿರುವುದಿಲ್ಲ. ಇದರ ಬಗ್ಗೆ ಪರಿಶೀಲಿಸಿ ಶೀಘ್ರ ಕ್ರಮ ತೆಗೆದುಕೊಳ್ಳಲಾಗುವುದು.

1994ರ ಸಾಲಿನಲ್ಲಿ 33 ತುರ್ತು ಕಾಮಗಾರಿಗಳಿಗೆ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಇವರಿಂದ 51.389 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು 4 ಕಾಮಗಾರಿಗಳಿಗೆ 2.71 ಲಕ್ಷ ರೂಪಾಯಿಗಳ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ದೊರೆಯಬೇಕಾಗಿದೆ. ಈ ಎಲ್ಲಾ 37 ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಇದರಲ್ಲಿ ಇದುವರೆವಿಗೂ ರೂ. 15.00ಲಕ್ಷಗಳು ಮಾತ್ರ ಜಿಲ್ಲಾಧಿಕಾರಿಗಳವರಿಂದ ಬಿಡುಗಡೆಯಾಗಿದ್ದು ಉಳಿದ 39.099 ಲಕ್ಷ ರೂಪಾಯಿಗಳ ಹಣ ಬಿಡುಗಡೆಯಾಗಬೇಕಾಗಿರುತ್ತದೆ. 1993-94 ಮತ್ತು 1994-95ನೇ ಸಾಲಿನಲ್ಲಿ ಮಾಡಲಾದ ಒಟ್ಟು 49 ಕಾಮಗಾರಿಗಳಿಗೆ ಇನ್ನೂ 50.959 ಲಕ್ಷ ರೂಗಳು ಜಿಲ್ಲಾಧಿಕಾರಿಗಳವರಿಂದ ಬಿಡುಗಡೆಯಾಗಬೇಕಾಗಿದ್ದು ಇದರ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಲಾಗುವುದು

1995ನೇ ಸಾಲಿಗೆ ಸಮುದ್ರ ಕೊರೆತ ಹಾಗೂ ನದಿ ಕೊರತಕ್ಕೆ ಸಂಬಂಧಿಸಿದಂತೆ 26 ಕಾಮಗಾರಿಗಳು ಅಂದಾಜಪಟ್ಟಿಗಳನ್ನು 119.34 ಲಕ್ಷ ರೂಪಾಯಿಗಳಿಗೆ ತಯಾರಿಸಿ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ಇವರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಹಣ ಬಿಡುಗಡೆ ಕೋರಿ ಪ್ರಸ್ತಾವನೆಯನ್ನು ನೀರಾವರಿ ಇಲಾಖೆಯಿಂದ ಸಲ್ಲಿಸಲಾಗಿದೆ. ಈ ಕಾಮಗಾರಿಗಳಲ್ಲಿ ಸುಮಾರು 50ಲಕ್ಷ ರೂಪಾಯಿಗಳ ಕಾಮಗಾರಿ ಪೂರ್ಣಗೊಂಡಿದೆ. ಈ ಬಾಬ್ತುನಲ್ಲಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರು 5.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಉಳಿದ 114.34 ಲಕ್ಷ ರೂಪಾಯಿಗಳನ್ನು ಕಂದಾಯ ಇಲಾಖೆಯಿಂದ (ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಂದ) ಬಿಡುಗಡೆ ಮಾಡುವ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಲಾಗುವುದು.

ಇದಲ್ಲದೆ ನಮ್ಮ ಇಲಾಖೆಯಿಂದ ತುರ್ತು ಕಾಮಗಾರಿಗಳಿಗಾಗಿ 50.00 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದೇ ಸಮಯದಲ್ಲಿ ನಾನೂ ಹಾಗೂ ನನ್ನ ಸಹೊದ್ಯೋಗಿಯಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದಂತಹ ಶ್ರೀ ಜಯಪ್ರಕಾಶ್ ಹೆಗಡೆಯವರ ಜೊತೆ ನಿನ್ನೆ ತಾನೆ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೇವೆ. ಸಹೋದರರಾದ ಶ್ರೀ ಸಭಾಪತಿಯವರು ಹೇಳಿರತಕ್ಕ ವಿಚಾರಗಳ ಬಗ್ಗೆ ಸಂಪೂರ್ಣವಾಗಿ ಪರಿಶೀಲಿಸಿ ಯಾವ ಕಾಮಗಾರಿಗಳು ಸಮುದ್ರ ಕೊರೆತವನ್ನು ನಿಲ್ಲಿಸುತ್ತವೆಯೋ ಆ ಎಲ್ಲಾ ಕಾಮಗಾರಿಗಳು ತುರ್ತಾಗಿ ಮಾಡಲಾಗುವುದೆಂಬುದಾಗಿ ತಮ್ಮ ಮೂಲಕ ಅವರಿಗೆ ತಿಳಿಸಬಯಸುತ್ತೇನೆ.

(6) ಕುಂದಾಪುರ ಕ್ಷೇತ್ರದ ಅಬ್ಬಾಡಿ ಗ್ರಾಮದ ಆರ್ಡಿಯಲ್ಲಿ ಎನ್.ಶೆಟ್ಟಿ ಪ್ರೌಢಶಾಲೆಯ ನಾಮ ಫಲಕ ಬದಲಾವಣೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪಾಧ್ಯಕ್ಷರೆ, ಕುಂದಾಪುರ ಕ್ಷೇತ್ರದ ಅಲ್ಬಾಡಿ ಗ್ರಾಮದ ಆರ್ಡಿಯಲ್ಲಿ ಪ್ರೌಢಶಾಲೆಯನ್ನು 60 ರ ದಶಕದಲ್ಲಿ ಪ್ರಾರಂಭಿಸಿರತಕ್ಕಂತಹ ಸಂದರ್ಭದಲ್ಲಿ ಧನ ಸಹಾಯ ಮಾಡಿದಂತಹ ಚಾರ್‌ಮಕ್ಕಿ ನಾರಾಯಣ ಶೆಟ್ಟಿಯವರ ಹೆಸರನ್ನು ಸದ್ರಿ ಪ್ರೌಢಶಾಲೆಗೆ ಇಡಲಾಗಿದ್ದು, ಆದರೆ ಜಿಲ್ಲಾ ಪರಿಷತ್ ವ್ಯವಸ್ಥೆ ಬಂದ ಮೇಲೆ ಚಾರ್‌ಮಕ್ಕಿ ನಾರಾಯಣ ಶೆಟ್ಟಿ ಪ್ರೌಢ ಶಾಲೆ (ಸಿ.ಎನ್. ಶೆಟ್ಟಿ ಪ್ರೌಢಶಾಲೆ) ಬದಲಾಗಿ ಜಿಲ್ಲಾ ಪಂಚಾಯತ್ ಪ್ರೌಢ ಶಾಲೆಯಾಗಿ ನಾಮಫಲಕವನ್ನು ಬದಲಾಯಿಸಲಾಗಿದೆ. ದಾನಿಗಳ ಹೆಸರನ್ನು ತೆಗೆಯುವ ಔಚಿತ್ಯವೇನು? ಹೆಸರು ಬದಲಾಯಿಸಿದ್ದರಿಂದ ಧನ ಸಹಾಯ ಮಾಡಿದವರ ಕುಟುಂಬದವರಿಗೆ ಮುಜುಗರವುಂಟುಮಾಡಿದಂತಾಗುವುದಲ್ಲವೇ? ಆದ್ದರಿಂದ ಸರ್ಕಾರ ಇನ್ನಾದರೂ ಈ ಬಗ್ಗೆ ತಕ್ಷಣ ಗಮನ ಹರಿಸಿ ಹಿಂದೆ ಇದ್ದ ಸಿ.ಎನ್. ಶೆಟ್ಟಿ ಜಿಲ್ಲಾ ಪಂಚಾಯ್ತಿ ಪ್ರೌಢಶಾಲೆಯೆಂದೇ ನಾಮಕರಣ ಮಾಡಬೇಕೆಂದು ಸದನದ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.